**<u>ಸಾಕ್ಷಿಗೆ ದಿನಾಂಕ 20.01.2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ ಕೆ.ಎನ್. ವಕೀಲರಿಂದಃ</u>**

1. ನನ್ನ ಪತಿಗೆ ತೊಂದರೆಯಾದ ನಂತರ 1 ನೇ ಎದುರುದಾರರನ್ನು ಪರಿಹಾರ ನೀಡಬೇಕೆಂದು ಕೇಳಿರುವುದಿಲ್ಲ. ಮ್ಯಾನೇಜರ್ ರವರು ದೂರು ನೀಡಿರುವ ಬಗ್ಗೆ ಗೊತ್ತು. ದೂರುದಾರರು ಸ್ಥಳಕ್ಕೆ ಹೋಗಿ ಅಲ್ಲಿನ ಸ್ಥಿತಿಗತಿಗಳನ್ನು ಗಮನಿಸಿ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ದೂರುದಾರರು ಸ್ಥಳಕ್ಕೆ ಹೋಗಿ ಚೈನ್ ಹಾಕಿರುವವರನ್ನು ಬಸವರಾಜು ಎಂದು ಮತ್ತು ನಾಗರಾಜು ಎನ್ನುವವರು ಚಾಲಕನ ಆಸನದಲ್ಲಿ ಇದ್ದರು ಎಂದು ಗಮನಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವಾದಾಗ ನಾಗರಾಜು ಎನ್ನುವವರು ಲಾರಿಯನ್ನು ಚಾಲನೆ ಮಾಡುತ್ತಿದ್ದರು ಎಂದರೆ ಅವರು ಕ್ಲಿನರ್ ಆಗಿದ್ದು, ಅವರಿಗೆ ಲಾರಿ ಚಾಲನೆ ಮಾಡಲು ಬರುವುದಿಲ್ಲ. ಅದರ ಆಧಾರದ ಮೇರೆಗೆ ಪೊಲೀಸರು ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ಸಂಪೂರ್ಣ ತನಿಖೆ ಮಾಡಿ ನಾಗರಾಜು ಅಲಿಯಾಸ್ ಪೂಜಾರ್ ನಾಗರಾಜ್ ಅಲಿಯಾಸ್ ನಾಗಯ್ಯ ರವರ ವಿರುದ್ದ ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಬಸವರಾಜು ರವರು ಅಪಘಾತದ ಸಮಯದಲ್ಲಿ ಲಾರಿಯನ್ನು ಚಾಲನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತ ಬಸವರಾಜು ರವರು 1 ನೇ ಎದುರುದಾರರ ಕಂಪೆನಿಯಲ್ಲಿ ಚಾಲಕನಾಗಿ ಕೆಲಸಕ್ಕೆ ನೇಮಕಗೊಂಡ ದಾಖಲೆ ಹಾಗೂ ಮಾಸಿಕ ವೇತನ ಭತ್ಯೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ನನ್ನ ಪತಿಯ ಡಿಎಲ್ ನ್ನು ಪಡೆದುಕೊಂಡು ಲಾರಿಯನ್ನು ಚಾಲನೆಗೆ ನೀಡಿರುತ್ತಾರೆ, ದಾಖಲೆಗಳು ಇರುವುದಿಲ್ಲ. ನಾನು 1 ನೇ ಎದುರುದಾರರಿಗೆ ಪರಿಹಾರ ಕೋರಿ ನೊಟೀಸ್ ನೀಡಿರುವುದಿಲ್ಲ .

**<u>ಮರು ವಿಚಾರಣೆಃ ಇಲ್ಲ.</u>**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**